೧.

ಸುಡು ಸುಡು ಯಾಚಕನ ಜನ್ಮ ವ್ಯರ್ಥ ವ್ಯರ್ಥ
ಕೊಡುವೆನೆಂದರೆ ಬಹುದಿವಸ ಕಾಯ್ದು
ಅಡಿಗೆ ಬಿದ್ದು ಅವನ ಮನಸು ತನ್ನ
ಕಡೆಗೆ ಮಾಡಿಕೊಂಡು ಯೋಚಿಸುತ
ಗಡಿಗೆಯೊಳಗಿನ ನೊಣದಂತೆ ಸುತ್ತುತ ಆಸೆ
ಬಿಡಲಾರದೆ ಹಿಡಿಯಲಾರದೆ ಮಿಡುಕುತ
ಕಡುಮೂರ್ಖನಂತೆ ನಾನಾದೆನು ಪ್ರಾಣೇಶ
ಸುಡು ಸುಡು ಯಾಚಕ ಜನ್ಮ ವ್ಯರ್ಥ ವ್ಯರ್ಥ
ಕಡುಸಂಪೂರ್ಣ ವಿಜಯವಿಠಲರೇಯ
ಕೊಡಗೈದಾತನಿರೆ ಇಂತು ಪರರಾಸೆ ।

೨.

ಹರಿಭಕುತಿಯಿಲ್ಲದವನೊಬ್ಬ ಕೋಣ
ಪರಿಪರಿ ಎಸಗಿದ್ದ ಸುಕೃತ ಕ್ಷೀಣ
ಧರೆಯೊಳಗವನೆ ಜೀರ್ಣಪದ ಕಾಣ
ಕೊರಳಲಿ ಹಾಕಿದ ಹಾರವ ಕಾಣ
ಸುರನರೋರುಗ ಮಧ್ಯ ಇಲ್ಲವಗೆ ತಾಣ
ಸಿರಿವಿಜಯವಿಠಲ ಪೊರೆಯನು ಪ್ರಾಣ ।

೩.

ಅನ್ಯದೇವತೆಗಳು ಕರೆದೊಯ್ದು ಮನ್ನಿಸಿ
ರನ್ನದಂದಣವೇರಿ ಮೆರೆಸಲು
ಮುನ್ನೇನು ಸುಖವಿನಿತಿಲ್ಲ ದು:ಖವಲ್ಲದೆ ಘೋರ
ಘನ್ನ ಘಾತಕವು ಎಂದಿಗೆ ತಪ್ಪದು
ಸನ್ನೆಯನು ಕೇಳಿ ಸರುವೋತ್ತಮ ಹರಿ ಉದಾ-
ಸೀನವನು ಮಾಡಿ ಕೆರ ಹೊಡೆಸಿದ ಸುಖ-
ವೇನು ಬಾರದು ಕಾಣೊ ಪನ್ನಗಾರಿಗಾದರು
ಅನ್ಯಥಾ ಬಿಡದಿರು ವಿಜಯವಿಠಲನ್ನ
ಅನ್ಯದೇವತೆಗಳು ಕರೆದೊಯ್ದು ಮನ್ನಿಸೆ ।

೪.

ಎತ್ತಣದೋ ಈ ಮಾಯಾ ಸಂಸಾರ
ನಿತ್ಯವಲ್ಲ ನಿತ್ಯವಲ್ಲ ವಿಚಾರಿಸೆ
ತುತ್ತುವನು ಮೆಲುವಾಗ ಕಂಠ ಕವಿದಂತೆ
ಮೃತ್ಯುಮಾರಿಗಳು ಕಾದಿಪ್ಪವೆಲ್ಲ
ಮರ್ತ್ಯದಲಿ ಪುಟ್ಟಿ ಸುಖ ಬಯಸುವ ನರಗೆ
ಹತ್ತು ಸಾವಿರ ಪ್ರಣಮ ಮಾಡುವೆನೊ
ಉತ್ತಮ ಗತಿ ಬಯಸುವ ನಾಯಿ ತಲೆಮೇಲಿನ-
ಬುತ್ತಿಯಂದದಿ ಕಾಣೊ ಸತಿಸುತರು
ಚಿತ್ತದಲ್ಲಾಡುವ ವಿಜಯವಿಠಲರೇಯನ
ತುತಿಸಲು ಬಂದು ಕೈವಲ್ಯದಾರಿಲಿಡುವ ॥

೫.

ನಾನು ನೀನು ಎಂದು ಒಮ್ಮೆಗಾದರು ನರ
ಅನಂತ ಜನುಮದಲಿ ನುಡಿದನಾಗೆ
ಶ್ವಾನಸೂಕರದುರ್ಯೋನಿಯಲ್ಲಿ ಪುಟ್ಟಿ
ಮಾನುಷಾಧಮನಾಗಿ ಕಟ್ಟಕಡೆಗೆ
ನಾನಾ ಸಂಕಟಪಟ್ಟು ಹೀನ ಭೋಜನ ಮಾಡಿ
ತಾನಿಳಿವನು ನಿತ್ಯನರಕದಲ್ಲಿ
ಅನಂತ ಜನುಮದೊಳು ಸೇವಕನೆಂದೆನೆ
ತಾನೊಲಿದು ಈವ ವಿಜಯವಿಠಲ ಗತಿ ।

೬.

ನಿನ್ನ ದಾಸನೆಂದೆನಿಸಿಕೊಳಲು ಬೇಕು ಭಂಗ ಪಡಲು ಬೇಕು
ದಿನ ಪ್ರತಿದಿನದಲ್ಲಿ ಅನ್ನವಸ್ತ್ರ ಕಾಣದೆ ಇರಬೇಕು
ಬೆನ್ನು ಬಿಡದೆ ರೋಗಂಗಳು ಹತ್ತಿರಲು ಬೇಕು
ತನ್ನವರ ಕೈಯಿಂದ ಛೀ ಎನಿಸಿಕೊಳಬೇಕು
ಪನ್ನಂಗಶಯನ ಶ್ರೀವಿಜಯವಿಠಲರೇಯ
ಎನ್ನ ಈ ಪರಿಯಲ್ಲಿ ಮಾಡಿದ ಬಗೆಯೇನು ।

೭.

ಕುಲಿಶ ನಂಬಿದ ನರಗೆ ಶೈಲದ ಭಯವುಂಟೆ
ಜಲಧಿ ನೆಲೆ ಬಲ್ಲವಗೆ ಕೊಳಚೆ ನೀರಿನ ಭಯವೆ
ಛಲದಂಕ ವಿಜಯವಿಠಲ ನಿನ್ನ ನೆನೆಯಲು
ಕೆಲಕಾಲ ಆರ್ಜಿಸಿದ ದುರಿತಗಳು ನಿಲ್ಲುವವೆ ।

೮.

ಕಠಿನವಾದರು ನಿನ್ನ ನಾಮ ಅನುಗಾಲ
ಜಠರದೊಳಗೆ ಇಟ್ಟು ಎಂತಾದರಾಗೆ
ನಟನೆಯ ಮಾಡುತ್ತ ತಿರುಗುವ ಮಾನವಗೆ
ಅಟವಿಯಲ್ಲಾದರೂ ಪೂರ್ಣ ಸುಖವು
ಸಟೆಯಲ್ಲ ಈ ಮಾತು ಅಜಭವಾದಿಗಳೆ ಬಲ್ಲರು
ನಿಚ್ಚಟಾ ತಿಳಿದು ಹೇಳಿದರು ಪುಸಿಯಲ್ಲ
ವಟಪತ್ರಶಾಯಿ ನಮ್ಮ ವಿಜಯವಿಠಲರೇಯ
ವಿಠಲಾ ಎಂದು ನುಡಿದವಗೆ ಆವ ಭಯವುಂಟು ।

೯.

ನಾರಾಯಣನ ನಾಮಕೆ ಇತರ ನಾಮಗಳೆಣೆಯುಂಟೆ
ತಾರತಮ್ಯದಿ ದೇವತೆಗಳೊಳಗೆ ಹರಿತನಕೆ ಸಮವುಂಟೆ
ಧಾರಿಣಿಯೊಳಗನ್ನದಾನಕೆ ಸಮಾನವುಂಟೆ
ಧೀರ ವಿಜಯವಿಠಲನ್ನ ದ್ವಾದಶಿ ತಿಥಿಗೆ ಸಮವುಂಟೆ ।

೧೦.

ಒಂದು ಕೈಯಲಿ ಖಡ್ಗ ಒಂದು ಕೈಯಲಿ ಹಲಗೆ
ಅಂದವಾಗಿ ಪಿಡಿದುಕೊಂಡು ದಿವಾ ರಾತ್ರಿಯಲಿ
ಬಂದು ಬದಿಯಲ್ಲಿ ನಿತ್ಯ ಬಾರಾಸನಾಗಿ
ಹಿಂದು ಮುಂದೆ ಉಪದ್ರವಾಗದಂತೆ ।

ಇಂದಿರೆರಮಣ ಕಾಯುತ್ತಲಿರೆ ಎನಗಾವ
ಬಂಧಕಗಳು ಇಲ್ಲ ಧನ್ಯ ಧನ್ಯ
ಕಂದರ್ಪನಯ್ಯ ಸಿರಿವಿಜಯವಿಠಲರೇಯ್ಯ ।
ದೇವ ಆಪತ್ತು ಬರಲೀಯ ನೋಡ ।

೧೧.

ಕೋಟಿ ಕೋಟಿ ಜನ್ಮಕೆ ನಿನ್ನ ನಾಮ ಒಂದೇ ಸಾಕು ।
ದಾಟಿಸುವುದು ಭವ ಸಾಗರವ ।
ಬೂಟಕತನದಲಿ ಹರಿದಾಸನಾದರೆ ।
ತೋಟವಿಲ್ಲದೆ ಮೇಟಿಯೆತ್ತಿದಂತೆ ।
ನೀಟಾಗದು ಕಾಣೋ ಎಂದಿಗೂ ಯಮ ಭಟರ ।
ತಾಟ ತಪ್ಪದೋ ಕಾಶಿಯಲ್ಲಿದ್ದರೂ ।
ಹಾಟಕಾಂಬರಧರ ವಿಜಯವಿಠಲರೇಯ ।
ನಾಟಿಸೋ ನಿನ್ನ ಚರಣಾಬ್ಜದಲಿ ಮನಸು ।

೧೨.

ಬಿಂಬ ಪೊಳೆಯುತಿರೆ ದಿಂಡ ದಂಡನೆಯಾಕೆ ।
ತುಂಬಿದೂಟವಿರೆ ತಿರುಪೆಯಾಕೆ ।
ಕೊಂಬೆಯುಳ್ಳ ಹಣ್ಣು ತಾನೇ ಬೀಳುತ್ತಿರಲು
ಕುಂಭಿಣಿಯಲಿ ಕೆಡಹಿ ಫಲ ಮೆಲುವರೆ ।
ಹಂಬಲಗೊಳಸಲ್ಲ ಕರ್ಮವೆಂಬುವ ತೊರೆದು ।

ಜ್ಞಾನಾಂಬುಧಿಯೊಳಗಿರು ನಂಬಿ ಹರಿಯ ಸಾರು ।
ಗಂಭೀರಪುರುಷ ಶ್ರೀ ಹರಿ ವಿಜಯವಿಠಲರೇಯನ ।
ಬಿಂಬ ನೋಡಿದವರಿಗೆ ಇಂಬು ಉಂಟು ವೈಕುಂಠದಲ್ಲಿ ।

೧೩.

ಅನಂತ ಕಲ್ಪಕ್ಕೆ ನಿನ್ನ ಮೊರೆ ಬಿದ್ದವಗೆ ।
ಖಿನ್ನತೆಯಿಲ್ಲವೆಂಬುದ ಕೇಳಿ ಬಲ್ಲೆ ।
ಚಿಣ್ಣ ಧ್ರುವ ಪ್ರಹ್ಲಾದ ಮೊದಲಾದ ಭಕ್ತರ ।
ಘನತೆ ಏನೆಂಬೆ ಲೋಕದಲ್ಲಿ ।
ಮನ್ನಿಸೋ ಮಹರಾಯಾ ವಿಜಯವಿಠಲರೇಯ ।
ಭಿನ್ನಪ ಕೈಕೊಂಡು ಭಕ್ತನ ಪಾಲಿಸೋ ।

೧೪.

ಸ್ನಾನ ಮಾಡಿದರಿನ್ನೇನು ಫಲವೊ
ಮೌನ ಮಾಡಿದರಿನ್ನೇನು ಫಲವೊ
ದಾನ ಮಾಡಿದರಿನ್ನೇನು ಫಲವೊ
ಸ್ನಾನ ಮೌನ ದಾನ ನಾನಾ ಕರ್ಮವೆಲ್ಲ
ಭಾನು ಉದಯದಲಿ ನೀನೆದ್ದು ಭಕುತಿಲಿ
ಶ್ರೀನಾರಾಯಣನೆಂಬೊ ನಾಮ
ಆನಂದವಾಗಿ ಒಮ್ಮೆ ಕೊನೆನಾಲಿಗೆಯಿಂದ
ನೀ ನೆನೆಯೊ ನೀ ನೆನೆಯೊ ಮನವೆ

ಸ್ನಾನ ಮಾಡಿದರಿನ್ನೇನು ಫಲ
ಜ್ಞಾನಗೋಚರ ವಿಜಯವಿಠಲನ್ನ
ಧ್ಯಾನದಲಿ ಒಮ್ಮೆ ನೆನೆದರೆ ಸಾಕು
ಸ್ನಾನ ಮಾಡಿದರಿನ್ನೇನು ಉಂಟು ।

೧೫.

ಎಲೊ ಎಲೊ ದುರಿತವೆ ಓಡು ಓಡು ಎನ್ನ
ಬಳಿಯಲ್ಲಿ ಮೊದಲಂತೆ ತಲೆ ಬಲಿತು ನಿಂದೆಯಾದರೆ ನಿನ್ನ
ಕುಲಕೆ ಕ್ಷೇಮವಿಲ್ಲ ಕೈಲಿ ಕಡ್ಡಿಯನಿತ್ತೆ
ಮಲೆತವರ ಗಂಡ ಸಿರಿಕೃಷ್ಣ ಕಂಡರೆ ನಿನ್ನ
ತಲೆಯ ಚೆಂಡಾಡುವ ಭೂತಬಲಿಯನೀವ
ತಿಳಿದುಕೊ ನಿನ್ನೊಳು ನೀನು ಮೊದಲಂತೆ ನಾನಲ್ಲ
ಸುಲಭ ವಿಜಯವಿಠಲ ಒಲಿದರೆ ಭಯವಿಲ್ಲ ।

೧೬.

ಪರಮರಹಸ್ಯವಿದು ಕೇಳಿರಿ ಸಜ್ಜನರು
ಅರುಹುವೆ ಸಿರಿಪತಿಯ ವ್ಯಾಪಾರವ
ಕರುಣಿಸಿ ವಾಕು ಮನೋಮಯನೆನಿಸಿ
ಶಿರದಶ ತೋಳೆರಡು ಪದವೆರಡು ಧರಿಸುತ್ತ
ಸ್ಥಿರದೇಹದಲಿ ನಿಂತು ತ್ರಿವಿಧರ ಮನದಲಿಪ್ಪ
ಸುರರಿಗೆ ಬಲಭಾಗ ಪಂಚಾಸ್ಯದಿ ಇವ–

ರಿವರ ಸ್ತ್ರೀಯರಿಗೆ ವಾಮಪಂಚಾಸ್ಯದಿಂದ
ಪ್ರೇರಣೆ ಮಾಡುತ್ತ ಸದಾಕಾಲ
ಶರಣವತ್ಸಲ ಸಿರಿವಿಜಯವಿಠಲರೇಯ
ಪ್ರಾಂತಕ್ಕೆ ಕೊಡುತಿಪ್ಪ ಇವರ ಗತಿ ।

೧೭.

ಮಡಿಮಾಡಿಕೊಂಬ ಬಗೆ ತಿಳಿಯಬೇಕು ಮನುಜ
ಮಡುವಿನೊಳಗಿನ ಉದಕ ಜಡವಲ್ಲದೆ
ಮಡಿಯೆಂದೆನಿಸಿಕೊಂಬ ವಸ್ತ್ರ ತಾನೆ ಜಡವು
ಮಡಿಯೆಂತಾಯಿತು ಪೇಳೋ ಸದಾಚಾರನೇ
ಜಡಜಡಕೆ ಸಂಬಂಧವಾದರೆ ತಕ್ಷಣಕೆ
ಉಡುವುದು ಹೊದಿವುದು ಶುಚಿ ಅಹುದೆ
ಜಡಕೆ ಈ ಸಾಮರ್ಥ್ಯ ಬಂದ ತರುವಾಯ
ಪೊಡವೀಶ ರಂಗಗೆ ಪೇಳು ಅದನೆ ವದಿದ್ದರೆ
ಕಡಲಶಯನ ನಮ್ಮ ವಿಜಯವಿಠಲರೇಯನ
ಅಡಿಗಳ ನೆನೆದವನು ಸರ್ವದಾ ಮಡಿ ಎನ್ನು ।

೧೮.

ಜಾಲಿಸಬೇಕು ಜಾಲಿಸಬೇಕು ಜಾಲಿಸಬೇಕು
ಜಾಲಗಾರನಾಗಿ ಪಾಪಜಾಲಂಗಳ ಕಸಪೋಗುವಂತೆ
ಜಾಲಿಸಬೇಕು ಜಾಲಿಸಿ ಒಳ್ಳೇ ವಸ್ತು ಸಂಪಾದಿಸಿ

ಜಾಳಿಗೆ ಚೆನ್ನಾಗಿ ತುಂಬಲು ಮಾಯಾ-
ಜಾಲ ವಿಜಯವಿಠಲನ ಸನ್ನಿಧಿಯಲ್ಲಿ
ಜಾಳಿಗೆಯಿಟ್ಟು ಜನನ ನೀಗಬೇಕು ।

೧೯.

ಜನನದ ಭಯ ಮರಣದ ಭಯ ಬರುತಿಪ್ಪ
ಮನೋ ಇಂದ್ರಿಯಗಳು ವಿಷಯಕ್ಕೆರಗುವ ಭಯ
ಕಾನನ ಭಯ ಬಲುರೋಗ ತೊಡಕುವ ಭಯ
ತೀವ್ರ ತಮಸಿನ ಭಯ ಬಂದರಾದರು
ಗಣನೆ ಮಾಡರು ಕಾಣೊ ಹರಿಯ ನಂಬಿದ ಜನರು
ಅನುಮಾನ ಸಲ್ಲದು ಸಂತತ ತಿಳಿವುದು
ಜನುಮಾದಿಕರ್ತ ಶ್ರೀವಿಜಯವಿಠಲನ
ಅರ್ಚನೆ ಮಾಡು ಅನುದಿನ ಭಯಗಳ ನೀಗೋ ।

೨೦.

ರೆಕ್ಕೆ ಮುರಿದ ಪಕ್ಷಿ ಬಾಯಿಬಿಟ್ಟಂತೆ ಗಗ-
ನಕ್ಕೆ ಮೊಗವೆತ್ತಿ ಕೂಗುತಿಪ್ಪೆ
ಅಕ್ಕರ ನಿನಗಿನ್ನು ಬಾರದೆ ಎಲೊ ದೇ-
ವರ್ಕಳ ಒಡೆಯನೆ ತ್ರಿಜಗದಲ್ಲಿ
ಠಕ್ಕಿಸಿ ಪೋದರೇನೊ ಸರ್ವಜೀವರೊಳು ಏ-
ತಕ್ಕೆ ಎನ್ನೊಬ್ಬನ ತುಕ್ಕಿಸುವೆಯೋ

ಚಕ್ಕಂದಾಗಿದೆ ನಿನಗೆ ನಾನೋರ್ವನೇ ಗತಿಯೆ
ಮುಕ್ಕುತಿಯಾಗಿಪ್ಪದೆ ಸರ್ವರಿಗೆ
ಬಕ್ಕದಾಸನು ನಾನು ವಿಜಯವಿಠಲ ನಿನ್ನ
ಲೆಕ್ಕಕ್ಕೆ ಮೊದಲು ಎನಿಸುವೆನೇನಯ್ಯಾ ॥

೨೧.
ನಿನ್ನ ಜನರ ಸಂಗ ಕೊಡು ಎನ್ನಂತರಂಗ
ಘನ್ನ ಸುಗುಣಾಂತರಂಗ ಮಂಗಳಾಂಗ
ಅನ್ಯಾಪೇಕ್ಷ ಒಲ್ಲೆ ಅಂದಿನ ಬವಣೆ ಬಲ್ಲೆ
ಮನ್ನಿಸು ಮಾರಮಣ ಇಲ್ಲೇ ಇಲ್ಲೇ
ಇನ್ನು ಈ ದೇಹದಲ್ಲೇ ಕಡೆ ಮಾಡು ಇಹದಲ್ಲಿ
ಮುನ್ನ ಪುಟ್ಟಿ ಬರುವ ಕರ್ಮದ ಬಲೆ
ಎನ್ನ ಮನೋರಥ ಸಿರಿವಿಜಯವಿಠಲ ಹರಿ
ಧನ್ಯನ ಮಾಡುವದು ಪಥವ ತೋರಿ ।

೨೨.
ಒಂದೆಂಟು ಬಾಗಿಲುಳ್ಳ ಪಟ್ಟಣದೊಳಗೆ
ಮುಂದೆ ಇಪ್ಪತ್ತನಾಲ್ಕು ಮನೆಯೊಳು
ತಂದೆನ್ನ ನಿಲ್ಲಿಸಿ ಒಳಗಿಟ್ಟು ಕಾವಲು ಮಾಡಿ
ಬಂಧನದೊಳಗಿಟ್ಟು ಬಳಲಿಸುವದನ್ಯಾಯ
ತಂದೆ ಅಂತರಾತ್ಮಕ ನೀನು ಒಳಗಿದ್ದು ಸ್ವತಂತ್ರ–

ನೆಂದೆನಿಸಿ ಎನ್ನ ಬರಿದೆ೩ ಕೊಲ್ಲಿಸುವರೇನೊ
ಕಂದರ್ಪಪಿತ ರಂಗ ನೀ ಕಾಯಬೇಕೆನ್ನ
ಎಂತಾದರೇನು ಅನಂತಮೂರುತಿ ವಿಜಯವಿಠಲ ।

೨೩.

ಕಾಲಕಾಲಕೆ ನಿನ್ನ ನಾಮದ ಸ್ಮರಣೆಯನು
ನಾಲಿಗೆಗೆ ಕೊಡು ಕಂಡ್ಯ ನಾರಾಯಣನೆ
ಕೀಳುಮತಿಯನೆ ಬಿಡಿಸೊ ಕೀರ್ತನೆಯ ಮಾಡಿಸೊ ನಿ-
ನ್ನಾಳುಗಳೊಳಗೆ ಊಳಿಗವನಿತ್ತು ಪಾಲಿಸೊ
ಬಳಲಿದೆನೊ ಭವದೊಳಗೆ ಬಿದ್ದು ಬ-
ಯಲಾಸೆಯಲಿ ನಾ ಕಾಲವ ಕಳೆದೆ
ಪಾಲಸಾಗರಶಾಯಿ ವಿಜಯವಿಠಲ ನಿನ್ನ
ಪಾಲಿಗೆ ಬಂದೆನೊ ಪರಮಪುರುಷ ಹರೇ ।

೨೪.

ನಿನ್ನ ದಾಸನೆಂದೆನಿಸಿಕೊಳ್ಳಲು ಬೇಕು ಭಂಗ ಪಡಲು ಬೇಕು
ದಿನ ಪ್ರತಿದಿನದಲ್ಲಿ ಅನ್ನವಸ್ತ್ರ ಕಾಣದೆ ಇರಬೇಕು
ಬೆನ್ನುಬಿಡದೆ ರೋಗಂಗಳು ಹತ್ತಿರಲು ಬೇಕು
ತನ್ನವರ ಕೈಯಿಂದ ಛೀ ಎನಿಸಿಕೊಳಬೇಕು
ಪನ್ನಂಗಶಯನ ಶ್ರೀವಿಜಯವಿಠಲರೇಯ
ಎನ್ನ ಈ ಪರಿಯಲಿ ಮಾಡಿದ ಬಗೆಯೇನು ।

೨೫.

ಆಕಳಿಗೆ ಕರುಗಳು ಏಸು ಇಪ್ಪಾವೆಂದು
ಲೋಕದೊಳು ಕೇಳಿದರೆ ಜನ ಒಪ್ಪಹುದು
ಈ ಕರುವಿಗೆ ಎಷ್ಟು ಆಕಳುಗಳುಂಟೆಂದು
ವಾಕು ಬೆಸಗೊಂಡರೆ ಜನ ಮೆಚ್ಚುವುದೆ
ಶ್ರೀಕಾಂತ ನಿನಗಿಂದು ಉತ್ತರ ಕೊಡಲಾಪೆನೆ
ಸಾಕುವ ದೊರೆಗಳು ಎಷ್ಟೆಂದು
ನೀ ಕೇಳಿದುದಕೆ ಸೋಜಿಗವಾಗಿದೆ ಎನಗೆ
ಸಾಕುವರು ನಿನ್ನ ವಿನಹ ಉಂಟೇನಯ್ಯ
ಬಾಕುಳಿಗಮಾನವರು ಎನ್ನಂಥವರು ನಿನಗ-
ನೇಕ ಜನ ತುಂಬಿಹುದು ನೋಡಿದಲ್ಲಿ
ಏಕೋ ಸ್ವಾಮಿ ನೀನೆ ಎನಗೋರ್ವನಲ್ಲದೆ
ನಾ ಕಾಣೆ ಇನ್ನೊಂದು ನಿನ್ನ ಸಮನಾ
ಶ್ರೀ ಕಳತ್ರ ವಿಜಯವಿಠಲ ವೆಂಕಟರಾಯ
ಯಾಕೆ ಎನ್ನೊಡನೆ ಈ ಮಾತು ಸೊಗಸೆ ।

೨೬.

ಉಪವಾಸವಿದ್ದವನಿಗೆ ಊರು ತುಂಬಿದರೇನು
ಅಪಹಾಸಗೊಳಿಸುವ ಗೆಳೆಯನಾದರೆ ಏನು
ಕುಪಿತವ ಬಿಡದವ ಕುಲಜನಾದರೇನು
ಕಪಟವ ಬಿಡದವನ ಕೂಡ ಉಂಡರೆ ಏನು

ಕೃಪೆ ಮಾಡದವನ ಕಾಲಿಗೆ ಬಿದ್ದರೆ ಏನು
ತಪಸಿಗಳೊಡೆಯ ನಮ್ಮ ವಿಜಯವಿಠಲರೇಯ ।

೨೭.

ತತ್ತ್ವಾಭಿಮಾನಿಗಳಿರಾ ಉತ್ತರ ಪಾಲಿಪುದು
ಎತ್ತಿ ಕರವ ಮುಗಿವೆ ವಿನಯದಲ್ಲಿ
ಆತ್ಮದೊಳಗೆ ನಿಮ್ಮ ವ್ಯಾಪಾರ ಘನವಯ್ಯ
ತತ್ತ್ವಸ್ಥಾನದಲ್ಲಿ ನಿತ್ಯವಾಗಿ
ದೈತ್ಯರಿಗೆ ಸರ್ವದಾ ನಿಮ್ಮ ಪ್ರೇರಣೆಯುಂಟು
ಅತ್ತ ಎಳೆಸದಿರಿ ದುಸ್ಸಂಗಕ್ಕೆ
ಚಿತ್ತದಲ್ಲಿ ನೀವೇ ನಿಜ ವ್ಯಾಪಾರ ಮಾಡುವರು
ಸತ್ಯಕ್ಕೆ ಎರಗುವ ಮಾರ್ಗವಿತ್ತು
ಉತ್ತಮ ಗುಣದಲ್ಲೇ ವೊದಲೆ ನಿಮ್ಮ ಪೂಜಿಪ
ಅರ್ಥಿಯಾಗಲಿ ಆತರುವಾಯದಿ
ಉತ್ತಮಶ್ಲೋಕ ಸಿರಿವಿಜಯವಿಠಲನ್ನ
ತುತಿಸಿ ಆತನ್ನ ಚರಣ ನೊಳ್ದದ ಮಾಡು ।

೨೮.

ದಾಸರ ಮನೆಯಲ್ಲಿ ವಾಸವಾಗಿದ್ದವ
ದಾಸರ ಬಳಿಯಲಿ ಸೇರಿಕೊಂಡವನೇನೋ
ದಾಸರ ಮನೆಯಲ್ಲಿ ನೀರು ಪೊತ್ತವ ನಾನು

ದಾಸರ ಮನೆಯೆಂಜಲೆಡೆ ತೆಗೆದವ ನಾನು
ದಾಸರುಂಡದ್ದು ಉಂಡು ಬೆಳೆದವ ನಾನು
ದಾಸರ ಮನೆ ಮುಂದೆ ರಾತ್ರಿ ಜಾಗರ ನಾನು
ದಾಸರ ನಂಬಿದ ದಾಸನು ನಾನು
ದೋಷಿ ನಾನಾದಡೆ ದೋಷರಹಿತ ಪುಣ್ಯ-
ರಾಶಿ ಪುರಂದರದಾಸರ ವ್ಯಾಲೆ ದಯಶರಧಿಯಿಟ್ಟು
ನೀ ಸಲಹುಯೆನ್ನ ಪಾಶವ ಬಿಡಿಸುತ್ತ
ಲೇಸು ಪಾಲಿಪ ನಮ್ಮ ವಿಜಯವಿಠಲರೇಯ
ಬೀಸಿ ಬೀಸಾಟದಿರು ಬಿಂಕದ ದೈವ ॥